

ಕರುಂಬಿತ್ತಿಲ್ ಶಿಬಿರದಲ್ಲಿ ಸಂಗೀತ ದಿಗ್ಗಜರಾದ ವಿದ್ವಾನ್ ಟಿ.ವಿ. ಗೋಪಾಲಕೃಷ್ಣನ್, ವಿದ್ವಾನ್ ತಿರುವಾರೂರು ಭಕ್ತವತ್ಸಲಂ, ಉಡುಪಿ ಗೋಪಾಲಕೃಷ್ಣನ್ ಜೊತೆಗೆ ವಿದ್ವಾನ್ ವಿಠ್ಠಲ ರಾಮಮೂರ್ತಿ ಕುಟುಂಬಿಕರು ಮತ್ತು ಶಿಬಿರಾರ್ಥಿಗಳು

ಕಾಳಜಿ ಮಾಡುತ್ತೇನೆ!. ಸಂಗೀತದ ವಿಷಯದಲ್ಲಿ ನೀವು ತಾವು ಎಂಬ ಭೇದವಿರಬಾರದು. ಮಕ್ಕಳು ಕಛೇರಿ ಕೊಡುವ ಉತ್ಸಾಹದಿಂದ ಮುಂದೆ ಬಂದಿದ್ದಾರೆಂದರೆ ನಾವು ಅವರಿಗೆ ಪೂರಕ ವಾತಾವರಣ ಕಲ್ಪಿಸಬೇಕು. ಹಾಗಾಗಿ, ನಾನು ಹೊಸ ಕಲಾವಿದರ ಅರಂಗೇಟ್ರಂಗಳಿಗೆ ವಯೊಲಿನ್ ನುಡಿಸಲು ಮುಂದಾಗುತ್ತೇನೆ. ಅವರು ಕಲಿತಿರುವ ವರ್ಣ ನನಗೆ ಗೊತ್ತಿಲ್ಲದೇ ಇದ್ದರೆ ಅವರೊಡನೆ ನಾನೂ ಕುಳಿತು ಪೂರ್ವ ಅಭ್ಯಾಸವನ್ನು ಮಾಡುತ್ತೇನೆ. ಸಂಗಿತ ಕಛೇರಿಯೆಂಬುದು ಒಂದು ತಂಡದ ಪ್ರಯತ್ನವಾಗಿರುತ್ತದೆಯೇ ಹೊರತು ಒಬ್ಬರದ್ದಲ್ಲ. ಅಲ್ಲಿ ನುಡಿಸುವ ವಿದ್ಯಾರ್ಥಿಗೆ ನಾನು ಅಜ್ಜನೋ, ದೊಡ್ಡಪ್ಪನೋ, ಗುರುವೋ ಆಗಿರುತ್ತೇನೆ. ಅವರು ಖುಷಿಯಿಂದ ಕಛೇರಿಯನ್ನು ಮುನ್ನಡೆಸುವಂತಹ ವಾತಾವರಣ ಸೃಷ್ಟಿಯಾಗಬೇಕು ಎಂಬುದು ನನ್ನಾಸೆ.

**◆ ರಾಗಗಳಿಗೂ ಸಂಗೀತಗಾರರ ಮನೋಧರ್ಮಕ್ಕೂ ಸಂಬಂಧವಿರುತ್ತದೆ ಅಲ್ಲವೇ. ನೀವು ಒಲಿಸಿಕೊಂಡ ರಾಗಗಳು, ಅವುಗಳನ್ನು ಸಾಧಿಸಲು ನೀವು ಮಾಡಿದ ಪ್ರಯತ್ನಗಳ ಬಗ್ಗೆ ಹೇಳಬಹುದೇ?**

ಜೀವನದ ಇತರ ವಿಚಾರಗಳು ಹಾಡುವಾಗ ತೊಡಕಾಗಬಾರದು. ಕೆಲವೊಮ್ಮೆ ಅಪೇಕ್ಷಿತ ರಾಗಗಳನ್ನು ಕೈಗೆತ್ತಿಕೊಂಡು ಹಾಡುವುದು ಸುಲಭವಾಗುವುದಿಲ್ಲ. ಆಗೆಲ್ಲ ಮನಸ್ಸಿಗೆ ಪ್ರಿಯವಾದ ರಾಗವೊಂದರಿಂದ ಆರಂಭಿಸಿ ನಂತರ ಕಷ್ಟಕರವಾದ ರಾಗಗಳನ್ನು ಕೈಗೆತ್ತಿಕೊಳ್ಳಬಹುದು. ಇನ್ನು ಸಾಧನೆ, ರಾಗಗಳನ್ನು ಒಲಿಸಿಕೊಳ್ಳುವುದು ಎನ್ನುವುದಕ್ಕಿಂತ ನಾನು ದೈನಂದಿನ ಅಭ್ಯಾಸವೇ ಎಲ್ಲದಕ್ಕೂ ಬಲ ತುಂಬುತ್ತದೆ ಎಂದು ಭಾವಿಸುವವನು. ಕಛೇರಿಗಳಿದ್ದಾಗ ನಾನು ಈಗಲೂ ಗಂಟೆಗಟ್ಟಲೆ ಅಭ್ಯಾಸ ಮಾಡುತ್ತೇನೆ. ತೀರಾ ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿದರೆ ಮಿಕ್ಕೆಲ್ಲ ದಿನಗಳಲ್ಲಿಯೂ ಅಭ್ಯಾಸ ಮಾಡುತ್ತೇನೆ. ಅಭ್ಯಾಸವೆನ್ನುವುದು ಎಲ್ಲ ಸಂಗೀತಗಾರರಿಗೂ ಕಡ್ಡಾಯವೇ. ಗಡಿಬಿಡಿಗಳಿದ್ದಾಗ ಹತ್ತು ನಿಮಿಷವಾದರೂ ಅಭ್ಯಾಸ ಮಾಡಬೇಕು ಎಂದು ಹೇಳುವವನು ನಾನು.